https://www.prajavani.net/district/bengaluru-city/miss-india-universe-568958.html

ಪ್ರಜಾವಾಣಿ

# ವೈಟ್ ಫೀಲ್ಡ್; ಚರ್ಮ ಚಿಕಿತ್ಸಾಲಯಕ್ಕೆ ಚಾಲನೆ



ವೈಟ್‌ಫೀಲ್ಡ್‌ನ ಕುಂದಲಹಳ್ಳಿಯಲ್ಲಿ ಕಾಸ್ಮೋಡರ್ಮಾ ಚರ್ಮ ಚಿಕಿತ್ಸಾಲಯವನ್ನು ನೋಯೊನಿಟಾ ಲೋಧ್ ಉದ್ಘಾಟಿಸಿದರು. ಡಾ.ಚೈತ್ರಾ ಇದ್ದರು

**ಬೆಂಗಳೂರು:** ನಗರದ ವೈಟ್‌ಫೀಲ್ಡ್‌ನ ಕಾಸ್ಮೋಡರ್ಮಾ ಚರ್ಮ ಮತ್ತು ಕೂದಲು ಚಿಕಿತ್ಸಾಲಯವನ್ನು 2014ರ ಮಿಸ್ ಇಂಡಿಯಾ ಯುನಿವರ್ಸ್ ನೊಯೊನಿಟಾ ಲೋಧ್ ಉದ್ಘಾಟಿಸಿದರು.

ಕಾಸ್ಮೆಟಿಕ್ ಡರ್ಮಟಾಲಜಿ ಸಕ್ರಿಯಗೊಳಿಸುವ ಹೊಸ ತಂತ್ರಜ್ಞಾನಗಳನ್ನು ಈ ಸಂಸ್ಥೆ ಹೊಂದಿದೆ. ಕಾಸ್ಮೋಡರ್ಮಾದಲ್ಲಿ ಗ್ರಾಹಕರ ಚರ್ಮದ ಪ್ರಕಾರವನ್ನು ವಿಶ್ಲೇಷಿಸಲು 3ಡಿ ಫೇಸ್ ಅನಾಲಿಸಿಸ್ ಅನ್ನು ಬಳಸುವ ಮೂಲಕ ಅವರ ಅಗತ್ಯಗಳಿಗೆ ಸರಿಹೊಂದುವಂತೆ ಚಿಕಿತ್ಸೆಗಳನ್ನು ಒದಗಿಸಲಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕಿ ಡಾ.ಚೈತ್ರಾ ಹೇಳಿದರು.

‘ಜನರು ತಮ್ಮ ಚರ್ಮ ಮತ್ತು ಕೂದಲಿನ ಕಾಳಜಿಯ ಬಗ್ಗೆ ಹೆಚ್ಚಿನ ಅರಿವು ಹೊಂದುತ್ತಿದ್ದಾರೆ. ಈ ಸಂಬಂಧಿಸಿದ ಕಳವಳಗಳನ್ನು ಪರಿಹರಿಸಲು ವೃತ್ತಿಪರರ ಪರಿಣತಿಯನ್ನು ನಾವು ಬಯಸುವುದು ಮುಖ್ಯ. ಮಾಡೆಲಿಂಗ್ ಕ್ಷೇತ್ರವು ಎಲ್ಲಾ ಸಮಯದಲ್ಲೂ ನಾವು ಉತ್ತಮವಾಗಿ ಕಾಣಿಸಿಕೊಳ್ಳುವುದನ್ನು ನಿರೀಕ್ಷಿಸುತ್ತದೆ. ನಾನು ಹೆಚ್ಚಾಗಿ ಕಾಸ್ಮೋಡರ್ಮಾಕ್ಕೆ ಹೋಗುತ್ತಿರುತ್ತೇನೆ. ಅಲ್ಲಿನ ವೈದ್ಯ ತಂಡದವರು ವೃತ್ತಿಪರರಾಗಿದ್ದು ನಾನು ಅವರನ್ನು ಸಂಪೂರ್ಣವಾಗಿ ನಂಬುತ್ತೇನೆ’ ಎಂದು ನೊಯೊನಿಟಾ ಲೋಧ್ ಅಭಿಪ್ರಾಯ ವ್ಯಕ್ತಪಡಿಸಿದರು.